## ಸೂಕ್ತಿಪ್ರಭ

ದೊಡ್ಡವರ ರೀತಿಯನ್ನು ಸಾಮಾನ್ಯ ಜನ ಅನುಸರಿಸುತ್ತಾರೆ. ಅವರು ಯಾವುದನ್ನು ಪ್ರಮಾಣವನ್ನಾಗಿ ಮಾಡುತ್ತಾರೋ ಅದನ್ನೇ ಲೋಕವು ಅನುಸರಿಸುತ್ತದೆ.

—ಭಗವಾನ್ ಶ್ರೀಕೃಷ್ಣ

ದೃಢನಿಷ್ಠೆಯುಳ್ಳ ಶ್ರದ್ಧಾವಂತನು ಪೃಥ್ವಿಯಂತೆ ಯಾವುದರ ವಿಷಯದಲ್ಲೂ ಅಸಮಾಧಾನ ತೋರುವುದಿಲ್ಲ.

—ಭಗವಾನ್ ಬುದ್ಧ

ಮೋಹವೆಂಬುದು ಎಚ್ಚತ್ತಿರುವವನಲ್ಲಿ ನಿದ್ರೆಯಾಗಿರುತ್ತದೆ, ನೋಡುತ್ತಿರುವವನಲ್ಲಿ ಕುರುಡುತನವಾಗಿರುತ್ತದೆ, ಶಾಸ್ತ್ರಜ್ಞರಲ್ಲಿ ಮಂದಮತಿತ್ವವಾಗಿರುತ್ತದೆ ಮತ್ತು ಪ್ರಕಟವಾದ ಅರ್ಥದಲ್ಲಿಯೂ ಅದನ್ನು ತಿಳಿಯಗೊಡದಂತೆ ಮಾಡುವ ಪ್ರತಿಬಂಧಕವಾಗಿರುತ್ತದೆ.

—ಲೋಕೋಕ್ತಿ

ನಾವು ಎಂದಿಗೂ ಬದುಕುವುದಿಲ್ಲ. ಕೇವಲ ಬದುಕುವ ನಿರೀಕ್ಷೆಯಲ್ಲೇ ಇರುತ್ತೇವೆ ಸದಾ.

—ವಾಲ್ಟೇರ್

ಮೌಲಿಕ, ಪವಿತ್ರ, ಸರಳ ಹಾಗೂ ಸಫಲವಾದ ಬದುಕಿನ ಪ್ರಭಾವವನ್ನು ಇಲ್ಲವಾಗಿಸುವ ಯಾವ ಶಕ್ತಿಯೂ ಈ ಭುವಿಯಲ್ಲಿಲ್ಲ.

—ಬುಕರ್ ಟಿ. ವಾಷಿಂಗ್‌ಟನ್

ಗುಣಿಯ ಬದುಕೇ ಬದುಕು, ಧರ್ಮಿಷ್ಠನ ಬದುಕೇ ಬದುಕು. ಗುಣ, ಧರ್ಮಗಳಿಲ್ಲದವನ ಬದುಕು ನಿಷ್ಫಲವಾದುದು.

—ಸುಭಾಷಿತ

ಜ್ಞಾನವಿಲ್ಲದ ಮಹತ್ವಾಕಾಂಕ್ಷೆ ಒಣ ಭೂಮಿಯ ಮೇಲಿರುವ ದೋಣಿಯಂತೆ

—ಮಾರ್ಕ್ ಲೀ

## ಪ್ರಾರ್ಥನೆ

ಕರಾರವಿಂದೇನ ಪದಾರವಿಂದಂ
ಮುಖಾರವಿಂದೇ ವಿನಿವೇಶಯಂತಮ್ ।
ವಟಸ್ಯ ಪತ್ರಸ್ಯ ಪುಟೇ ಶಯಾನಂ
ಬಾಲಂ ಮುಕುಂದಂ ಮನಸಾ ಸ್ಮರಾಮಿ॥

ಕರಕಮಲದಿಂದ ಪದಕಮಲವನ್ನು ಮುಖಕಮಲದಲ್ಲಿ ಇಟ್ಟುಕೊಂಡು ವಟಪತ್ರದ ಮೇಲೆ ಮಲಗಿರುವ ಬಾಲಮುಕುಂದನನ್ನು ಮನಸ್ಸಿನಲ್ಲಿ ಸ್ಮರಿಸುತ್ತೇನೆ.

(ಶ್ರೀಕೃಷ್ಣಕರ್ಣಾಮೃತಮ್ II.೫೭)

ಹೇ ದೇವ ಹೇ ದಯಿತ ಹೇ
ಜಗದೇಕಬಂಧೋ
ಹೇ ಕೃಷ್ಣ ಹೇ ಚಪಲ ಹೇ
ಕರುಣೈಕಸಿಂಧೋ ।
ಹೇ ನಾಥ ಹೇ ರಮಣ ಹೇ
ನಯನಾಭಿರಾಮ
ಹಾ ಹಾ ಕದಾ ನು ಭವಿತಾಸಿ
ಪದಂ ದೃಶೋರ್ಮೇ ॥

ಹೇ ದೇವ, ಹೇ ಪ್ರಿಯ, ಜಗತ್ತಿನಲ್ಲೆಲ್ಲ ಒಬ್ಬನೇ ಸ್ನೇಹಿತನೆ, ಹೇ ಕೃಷ್ಣ, ಹೇ ಚಪಲ, ಹೇ ಕರುಣಾಸಾಗರ, ಹೇ ನಾಥ, ಹೇ ರಮಣ, ಹೇ ನಯನಾಭಿರಾಮ, ಹಾ! ಹಾ! ನನ್ನ ದೃಷ್ಟಿಗೆ ಎಂದು ಗೋಚರನಾಗುವೆ?

(ಶ್ರೀಕೃಷ್ಣಕರ್ಣಾಮೃತಮ್ I.೪೦)

ಮುಕುಂದ ಮೂರ್ಧ್ನಾ ಪ್ರಣಿಪತ್ಯ ಯಾಚೇ
ಭವಂತಮೇಕಾಂತಮಿಯಂತಮರ್ಥಮ್ ।
ಅವಿಸ್ಮೃತಿಸ್ತ್ವಚ್ಚರಣಾರವಿಂದೇ
ಭವೇ ಭವೇ ಮೇಽಸ್ತು ಭವತ್ಪ್ರಸಾದಾತ್ ॥

ಹೇ ಮುಕುಂದ, ನಿನಗೆ ತಲೆಬಾಗಿ ನಮಸ್ಕರಿಸಿ, ಇಷ್ಟೊಂದನ್ನು ಏಕಾಂತವಾಗಿ ಪ್ರಾರ್ಥಿಸುತ್ತೇನೆ; ನಿನ್ನ ಅನುಗ್ರಹದಿಂದ ನನಗೆ ಜನ್ಮಜನ್ಮದಲ್ಲಿಯೂ ನಿನ್ನ ಚರಣಾರವಿಂದಗಳ ಮರೆವು ಇರದಂತೆ ಆಗಲಿ.

(ಮುಕುಂದಮಾಲಾ, ೩)